ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ ಎಂದು ನಾನು ಸದನದಲ್ಲಿ ಹೇಳಿದ್ದೇನೆ. ಆದರಿಂದಾಗಿ ಕಾರವಾರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿರುವ ಅಂಕೋಲಾ ಕೂಡ ತಾಲ್ಲೂಕು ಆಗಿರುವುದರಿಂದ ದೊಡ್ಡ ಪಟ್ಟಣವಾಗಿರುವ ಅಂಕೋಲಾದಲ್ಲೂ ಸಹಿತ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ನಮ್ಮ ಹಣಕಾಸಿನ ಅವಶ್ಯಕತೆ, ಹಣಕಾಸಿನ ಲಭ್ಯತೆಯ ಆಧಾರದಮೇಲೆ ಮಾಡಬಹುದೇ ವಿನಹ ಹೀಗೆ ಮಾಡುತ್ತೇವೆ ಎಂದು ಹೇಳಿ ಭರವಸೆಯನ್ನು ಕೊಡುವ ಸ್ಥಿತಿಯಲ್ಲಿ ನಾನು ಇಲ್ಲ. ಆದರೂ ನಾನು ಅಧಿವೇಶನದ ನಂತರ ಆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕರೆಯಿಸಿ ಆದಷ್ಟು ಬೇಗ ಆ ಜಮೀನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಎಂದು ಅವರಿಗೆ ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ರೆವಿನ್ಯೂ ಇಲಾಖೆಯವರ ಜೊತೆಗೆ ಅದೇನು ಮಾತನಾಡಬೇಕು? ಸಚಿವರು ಸಚಿವರೇ ಮಾತನಾಡಿಕೊಂಡು ನಿರ್ದೇಶನ ಕೊಡಬೇಕಾಗಬಹುದು, ಕಂದಾಯ ಇಲಾಖೆಯ ಸಚಿವರ ಜೊತೆಗೆ ಮಾತನಾಡಿಕೊಂಡು ಆ ಬಗ್ಗೆ ಪ್ರಯತ್ನವೇನಾದರೂ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾಡೋಣ.

ಚಾಮರಾಜನಗರ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ತೆಂಗಿನ ಮರಗಳಿಗೆ ರೋಗ ತಗುಲಿರುವುದು

131 - ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ತೋಟಗಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜ ನಗರವೂ ಸೇರಿದಂತೆ ರಾಜ್ಯದಾದ್ಯಂತ ಎಷ್ಟು ಪ್ರದೇಶಗಳಲ್ಲಿ ತೆಂಗಿನ ಮರಗಳಿಗೆ ರೋಗ ತಗುಲಿದೆ.

ಆ) ತೆಂಗಿನ ರೋಗ ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಚಾಮರಾಜ ನಗರವೂ ಸೇರಿದಂತೆ ರಾಜ್ಯದಲ್ಲಿ ಸುಮಾರು 11091 ಹೆಕ್ಟೇರ್ ಪ್ರದೇಶದಲ್ಲಿ ಕಪ್ಪುತಲೆ ಹುಳುವಿನ ಬಾಧೆ ಕಾಣಿಸಿ ಕೊಂಡಿದೆ. ಕಾಂಡ ಸೋರುವ ಮತ್ತು ಅಣಬೆ ರೋಗಗಳು ಅಲ್ಲಲ್ಲಿ ಸುಮಾರು 1320 ಹೆಕ್ಟೇರ್ ಪ್ರದೇಶದಲ್ಲಿ ಕಾಣಿಸಿಕೊಂಡಿದೆ.

ಆ) 1) ತೆಂಗಿನ ಕಪ್ಪುತಲೆ ಹುಳುವಿನ ಸಮಗ್ರ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ತಂಡಗಳನ್ನು ರಚಿಸಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

2) ಕೀಟಬಾದೆ ಪ್ರಾರಂಭಿಕ ಹಂತದಲ್ಲಿರುವ ತೋಟಗಳಲ್ಲಿ ಪರೋಪಜೀವಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

3) ಕೀಟಬಾದೆ ತೀವ್ರವಾಗಿರುವ ಪ್ರದೇಶಗಳಲ್ಲಿ ಬೇರಿನ ಮೂಲಕ ಕೀಟನಾಶಕದ ಉಪಚಾರ ಕೈಗೊಳ್ಳಲಾಗುತ್ತಿದೆ.

4) ಕೀಟನಾಶಕಗಳನ್ನು ರೈತರಿಗೆ ಉಚಿತವಾಗಿ ಒದಗಿಸಲಾಗುತ್ತಿದೆ.

5) ಇದೇ ರೀತಿ ಕಾಂತ ಸೋರುವ ರೋಗ, ಅಣಬೆ ರೋಗ ಇತ್ಯಾದಿಗಳಿಗೂ ಶಿಲೀಂಧ್ರ ನಾಶಕಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

6) ಸಸ್ಯ ಸಂರಕ್ಷಣಾ ಸರ್ವೇಕ್ಷಣೆ ಹಾಗೂ ನಿಯಂತ್ರಣ ಕೆಲಸಗಳನ್ನು ತ್ವರಿತಗೊಳಿಸಲು ಸಸ್ಯ ಸಂರಕ್ಷಣಾ ತಂಡಗಳ ಉಪಯೋಗಗಳಿಗೆ ತೆಂಗು ಅಭಿವೃದ್ಧಿ ಮಂಡಳಿಗಳ ಸಹಯೋಗ ಯೋಜನೆಯಲ್ಲಿ 4 ಜೀಪ್‌ಗಳನ್ನು ಖರೀದಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಒಂದು ಕಾಲದಲ್ಲಿ "ಆರುವರ್ಷ ನನ್ನನ್ನು ಸಾಕು, ನೂರು ವರ್ಷ ನಿನ್ನನ್ನು ಸಾಕುತ್ತೇನೆ" ಎನ್ನುವ ಗಾದೆ ಈ ತೆಂಗಿನ ಮರದ ಬಗ್ಗೆ ಇತ್ತು. ಆದರೆ ಇವತ್ತು ಆರು ವರ್ಷಕ್ಕೆ ತೆಂಗಿನ ಮರ ಹಾಳಾಗುವ ಪರಿಸ್ಥಿತಿಗೆ ಬಂದಿದೆ. ಮಾನ್ಯ ಸಚಿವರು ಹೇಳಿದ್ದಾರೆ, ಇದನ್ನು ನಿಯಂತ್ರಣ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಲಕ್ಷಾಂತರ ನೀವು 11091 ಹೇಕ್ಟೇರ್ ಪ್ರದೇಶದಲ್ಲಿ ಕಪ್ಪು ತಲೆ ಹುಳುವಿನ ಬಾಧೆ ಕಾಣಿಸಿಕೊಂಡಿದೆ ಎಂದು. ನಾನು ಅನೇಕ ಕಡೆ ನೋಡಿದ್ದೇನೆ ಚಾಮರಾಜನಗರವೂ ಸೇರಿದಂತೆ ಅನೇಕ ಕಡೆ ನೀವು ಯಾವುದೂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ಈ ರೋಗವನ್ನು ತಡೆಹಿಡಿಯುವುದಕ್ಕೆ ಸ್ಪಷ್ಟವಾದ ಕಾರ್ಯಕ್ರಮಗಳೇನು ಎನ್ನುವುದನ್ನು ಈ ಸದನದ ಮುಂದೆ ತಾವು ತಿಳಿಸುತ್ತೀರಾ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ತೆಂಗಿನ ಮರದ ಬಗ್ಗೆ ಹೇಳಿದ್ದಾರೆ ಅದು ನಿಜ ಅದು ಕಲ್ಪವೃಕ್ಷ. ರೈತರಿಗೆ ಬಹಳ ಆದಾಯವನ್ನು ಕೊಡುವ ಒಂದು ವೃಕ್ಷ. ಇದಕ್ಕೆ ತೋಟಗಾರಿಕೆ ಇಲಾಖೆ ಎಲ್ಲಾ ರೀತಿಯ ಒತ್ತನ್ನು ಕೊಟ್ಟು ಹೆಚ್ಚಿನ ಪ್ರಮಾಣದಲ್ಲಿ ಈ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ಎಲ್ಲಾ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ. ಆದರೆ "ಅನೆ ಹೊಟ್ಟೆಗೆ ಮಜ್ಜಿಗೆ" ಎಂದು ಹೇಳುವ ಹಾಗೆ ಸಾಕಷ್ಟು ಹಣದ ಕೊರತೆ ಇದೆ. ಆದರೂ ಕೂಡ ಇವತ್ತು ಇಡೀ ರಾಜ್ಯದಲ್ಲಿ 11091 ಹೆಕ್ಟೇರ್ ಪ್ರದೇಶದಲ್ಲಿ ಈಗ ಈ ರೋಗ ಹರದಿಡೆ. ಅದನ್ನು ಕಂಟ್ರೋಲ್ ಮಾಡಲಿಕ್ಕೆ ನಾವು ಈಗಾಗಲೇ ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ಅದು ವಿಶೇಷವಾಗಿ ಚಾಮರಾಜನಗರ ತಾಲ್ಲೂಕಿಗೆ 45 ಸಾವಿರ ಮರಗಿಡಗಳಿಗೆ ಎಫೆಕ್ಟ್ ಆಗಿದೆ. ಮತ್ತು ಕೆಂಪು ಮೂತಿ ಹುಳುವಿನ ಬಾಧೆ 5200 ಗಿಡಗಳಿಗೆ ಮತ್ತು ಕಾಂಡಾ ಸೋರುವ ರೋಗದ ಬಾಧೆಗೆತುತ್ತಾದ ಮರಗಳ ಸಂಖ್ಯೆ 1500. ಒಟ್ಟು ಈಗಾಗಲೇ 1,22,800 ರೂಪಾಯಿ ಔಷಧಿ ಉಪಚಾರಗಳಿಗೆ ಚಾಮರಾಜನಗರ ತಾಲ್ಲೂಕಿಗೆ ಮಾತ್ರ ಈಗಾಗಲೇ ಕೊಟ್ಟು ಅದನ್ನು ನಿಯಂತ್ರಣ ಮಾಡುತ್ತಿದ್ದೇವೆ. ಜೊತೆಗೆ ವಿಶೇಷವಾಗಿ ಈ ಕೋಕನೆಟ್ ಬೋರ್ಡ್ ಎಂದು ಹೇಳಿ ಕೇರಳದಲ್ಲಿದೆ, ಇಷ್ಟು ದಿವಸ ಅವರು ನಮಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದರು. ಡಾ|| ಪ್ರಫುಲ್ ಚಂದ್ರರವರನ್ನು ನಾವು ಅಲ್ಲಿ ನಿರ್ದೇಶಕರಾಗಿ ನೇಮಕ ಮಾಡಿದಮೇಲೆ ಮಲತಾಯಿಧೋರಣೆಯನ್ನು ಬಿಟ್ಟು ಇವತ್ತು ಹೆಚ್ಚು ಹಣವನ್ನು ತರಲಿಕ್ಕೆ ಈ ವರ್ಷ 97-98ನೇ ಸಾಲಿಗೆ 2 ಕೋಟಿ 8 ಲಕ್ಷ ರೂಪಾಯಿಗಳ ಅನುದಾನವನ್ನು ಪಡೆಯುತ್ತಿದ್ದೇವೆ. ಅದರ ಹಿಂದೆ ಎಷ್ಟು ಇತ್ತು ಎಂದರೆ 20 ಲಕ್ಷ, 50 ಲಕ್ಷ, 50 ಲಕ್ಷವೇ ನಮಗೆ ಜಾಸ್ತಿ ಕೊಡುತ್ತಿದ್ದರು.

ಈ ವರ್ಷದಲ್ಲಿ 1 ಕೋಟಿ 20 ಲಕ್ಷ ರೂಪಾಯಿಗಳನ್ನು ನಾವು ತಂದಿದ್ದೇವೆ. ಆ ಕಾರಣದಿಂದ ಚಾಮರಾಜನಗರಕ್ಕೆ ಒಂದು ಸ್ಟಾಡನ್ನು ಬಿಟ್ಟಿದ್ದೇವೆ. ಇವತ್ತು 4 ಸ್ಟಾಡನ್ನು ಅಡಿಷನಲ್ ಆಗಿ ಆ್ಯಡ್ ಮಾಡಿದ್ದೇವೆ. ಆ ಕಾರಣದಿಂದ ನಿಯಂತ್ರಣ ಮಾಡಲಿಕ್ಕೆ ಸರ್ಕಾರ ಎಲ್ಲಾ ಪ್ರಯತ್ನವನ್ನು ಮಾಡುತ್ತಿದೆ. ಇನ್ನೂ ಹೆಚ್ಚಿನ ಪ್ರಯತ್ನವನ್ನು ಮಾಡಲಿಕ್ಕೆ ಸಾಧ್ಯ ಉಂಟು. ತಾವು ಸಹಕಾರ ಮಾಡಿದರೆ ಖಂಡಿತವಾಗಿಯೂ ಇನ್ನು ಹೆಚ್ಚಿನ ಕೆಲಸವನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸುಮಾರು 15 ಲಕ್ಷ ತೆಂಗಿನ ಮರಗಳಿಗೆ ಈ ರೋಗ ತಗುಲಿದೆ. ಕನಿಷ್ಟ 15 ಲಕ್ಷ 30 ಲಕ್ಷ ಬೆಳೆದಿರುವ ತೆಂಗಿನ ಮರ, 20 ವರ್ಷ ಬೆಳೆದಿರುವ ತೆಂಗಿನ ಮರ, ಈ ದೃಷ್ಟಿಯಿಂದ ನೋಡಿದಾಗ ಸರ್ಕಾರ ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ಇನ್ನು 5 ವರ್ಷದಲ್ಲಿ ತೆಂಗು ಸಂಪೂರ್ಣವಾಗಿ ಸರ್ವನಾಶವಾಗುತ್ತದೆ. ಕರ್ನಾಟಕದಲ್ಲಿ ಸಂಪೂರ್ಣವಾಗಿ ತೆಂಗು ಹೊರಟುಹೋಗುತ್ತದೆ. ಆದ್ದರಿಂದ ನೀವು ಸ್ಪಷ್ಟವಾಗಿ ಸತ್ಯವಾದ ಉತ್ತರವನ್ನು ಈ ಸಭೆಯ ಮುಂದೆ ಕೊಟ್ಟು ನೀವು ಅದನ್ನು ಹೇಳಬೇಕು ನಿಯಂತ್ರಣ ಮಾಡುವುದಕ್ಕೆ. ನಿಯಂತ್ರಣ ಮಾಡುವುದಕ್ಕಾಗುವುದಿಲ್ಲವೆಂದರೆ ಮುಂದಿನ ಕಾರ್ಯಕ್ರಮವೇನು? ಅದನ್ನು ತಾವು ಹೇಳಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಇಲ್ಲಿ ಎರಡು ವಿಚಾರ ಇದೆ. ಇದು ತೋಟಗಾರಿಕೆ ಇಲಾಖೆ ಮಾತ್ರ ಜವಾಬ್ದಾರಿಯಲ್ಲ. ರೈತರ ಜವಾಬ್ದಾರಿಯೂ ಇರುತ್ತದೆ. ಇದು ಪ್ರಾರಂಭವಾದಂಥ ಸಂದರ್ಭದಲ್ಲಿ ಲ್ಯಾಬೊರೇಟರಿ ಮಾಡಿ ಪರೋಪಜೀವಿಗಳನ್ನು ಅಂಗಾಂಗ ಮಾಡಿ, ಎಲ್ಲೆಲ್ಲಿ ತೆಂಗಿನ ತೋಟ ಇದೆ, ಅಲ್ಲೆಲ್ಲಾ ಕೂಡ ಪರೋಪಜೀವಿಗಳನ್ನು ಬಿಡಬೇಕು. ಅಲ್ಲಿ ನೂರು ಎಕರೆ ಇದ್ದರೆ 50 ಎಕರೆ ಜಮೀನುಗಳಿಗೆ ರೈತರು ಸಹಕಾರ ನೀಡಿ ಇದನ್ನು ಉಪಯೋಗಿಸಿಕೊಳ್ಳದೇ ಹೋದರೆ ಒಂದು ತೋಟ ಮಧ್ಯ ಬಿಟ್ಟುಹೋದರೆ ಅದನ್ನು 90 ತೋಟಕ್ಕೂ ಮಾಡಿದ್ದೂ ಕೂಡ ನಿಷ್ಪ್ರಯೋಜಕವಾಗುತ್ತದೆ. ರೈತರ ಸಹಕಾರ ಕೂಡ ಬೇಕಾಗುತ್ತದೆ. ರೈತರು ಮತ್ತು ತೋಟಗಾರಿಕೆ ಇಲಾಖೆ ಎರಡೂ ಕೂಡ ಪ್ರಯತ್ನ ಮಾಡಿದರೆ ಇದನ್ನು ನಿಯಂತ್ರಣ ಮಾಡಬಹುದೇ ಹೊರತು ಬೇರೆ ಏನೂ ಇಲ್ಲ. ಆದ್ದರಿಂದ ರೈತರೂ ಕೂಡ ಜಾಗೃತಗೊಳ್ಳಬೇಕು. ರೈತರಿಗೂ ಕೂಡ ತಮ್ಮ ಗಿಡಗಳನ್ನು ತಾವು ಪೋಷಿಸಬೇಕು ಎನ್ನುವುದು ಇರಬೇಕು. ಇದನ್ನು ಫ್ರೀಯಾಗಿ ಕೊಡುತ್ತಿದ್ದೇವೆ. ಎಲ್ಲಾ ಔಷಧಿಗಳನ್ನು ಪುಕ್ಕಟೆಯಾಗಿ ಕೊಡುತ್ತೇವೆ. ಅದಕ್ಕೇನೂ ಅಡ್ಡಿ ಇಲ್ಲ. ಎಷ್ಟೇ ಇದ್ದರೂ ಕೊಡುತ್ತೇವೆ. ಆದರೆ ರೈತರು ಸಹಕಾರ ನೀಡಬೇಕು ಅಷ್ಟೆ. ಕೆಲವರು ಯಾರೋ ಇಂಟರೆಸ್ಟ್ ಇಲ್ಲದೇ ಇರುವವರು ಬಿಟ್ಟುಬಿಡುತ್ತಾರೆ. ಆಗ ಎಲ್ಲದಕ್ಕೂ ಕೂಡ ಎಫೆಕ್ಟ್ ಆಗುತ್ತದೆ. ಆದ್ದರಿಂದ ರೈತರ ಸಹಕಾರ ಕೂಡ ಈ ಸಂದರ್ಭದಲ್ಲಿ ಬೇಡುತ್ತೇನೆ. ಎಷ್ಟೇ ರೋಗ ಬಂದಿದ್ದರೂ ಕೂಡ ನಿಯಂತ್ರಣ ಮಾಡಲಿಕ್ಕೆ ಸರ್ಕಾರ ಶಕ್ತವಾಗಿದೆ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಸ್ವಾಮಿ. ಖಂಡಿತಾ ಸರ್ಕಾರ ವಿಫಲವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಳೆಗಾಲ ಚೆನ್ನಾಗಿ ಆಗಿದ್ದರೆ ಈ ಕಪ್ಪುತಲೆ ಹುಳು ರೋಗ ಕಡಿಮೆಯಾಗುರುವುದು. ನಾವು ಇವರ ಅಧಿಕಾರಿಗಳಿಗೆ ಆಗಲೇ ಸೂಚನೆ ಕೊಟ್ಟು ಮಳೆ ಕಡಿಮೆಯಾಗಿದೆ, ಕಪ್ಪುತಲೆ ಹುಳು ರೋಗ ಜಾಸ್ತಿಯಾಗುತ್ತದೆ ಎಂದು ಹೇಳಿದೆವು. ಈ ಪ್ಯಾರಾಸೈಟ್

ಮಾಡಲಿಕ್ಕೆ ಎರಡು ವ್ಯವಸ್ಥೆ ಇತ್ತು. ಒಂದು ಸರ್ಕಾರಿ ವ್ಯವಸ್ಥೆ. ಇನ್ನೊಂದು ಖಾಸಗಿಯವರಿಗೆ ಒಂದು ಪ್ಯಾರಾಸೈಟ್‌ಗೆ 6 ಪೈಸೆ 7 ಪೈಸೆ ಕೊಟ್ಟು ಮಾಡುತ್ತಿದ್ದರು. ಎಲ್ಲಾ ಪ್ಯಾರಾಸೈಟ್ ಮಾಡುತ್ತಿದ್ದ ಲ್ಯಾಬ್‌ಗಳನ್ನು ಇವರು ಏಕೆ ನಿಲ್ಲಿಸಿದರು? ಪ್ಯಾರಾಸೈಟನ್ನು ಈ ಸ್ಥಿತಿಯಲ್ಲಿ ನಿರೀಕ್ಷಣೆ ಮಾಡಿ ಮೊದಲೇ ಏಕೆ ಬಿಡಲಿಲ್ಲ, ಇವರು ವಾತಾವರಣದಲ್ಲಿ, ಆ ಸುತ್ತ ಇರುವ ತೋಟಗಳಿಗೆಲ್ಲಾ ಪ್ಯಾರಾಸೈಟ್ಸ್ ಬಿಡಬೇಕಾಗಿತ್ತು. ಮೂರನೆಯದು ತಾವೇನು ಕೆಮಿಕಲನ್ನು ಉಚಿತವಾಗಿ ಕೊಡುತ್ತಿದ್ದೇವೆ ಎನ್ನುತ್ತೀರಿ, ಅರ್ಧ ಧಾರಣೆ ನಿಗದಿ ಮಾಡಿದ್ದೀರಿ. 50 ಪರ್ಸೆಂಟ್ ರೇಟು ಎಂದು. ತಾವೇ ರೇಟು ಕಂಟ್ರಾಕ್ಟ್ ಮಾಡಿದಾಗ ಅದು ಪೂರ್ತಿಧಾರಣೆಯಾಗುತ್ತದೆ ಇವತ್ತು ಮಾರುಕಟ್ಟೆಯಲ್ಲಿ ಕೊಂಡುಕೊಂಡು ಬಂದರೆ ರೈತನಿಗೆ. ಹಾಗಾಗಿ ಯಾರೂ ಕೊಳ್ಳುತ್ತಿಲ್ಲ. ನಾಲ್ಕನೆಯದು ಸ್ವಾಮಿ ಅವರು ಹೇಳಿದಹಾಗೆ ಒಂದು ಕಡೆ ಇದ್ದರೆ ಗಾಳಿ ಬೀಸಿಬಿಟ್ಟರೆ ಆ ಸುತ್ತೆಲ್ಲಾ ಈ ರೋಗ ವ್ಯಾಪಿಸಿಬಿಡುತ್ತದೆ. ಅವರು ಪೂರಾ ತೆಂಗಿನ ಮರದ ಗರಿಯೆಲ್ಲಾ ಕಡಿದು ಮೇಲುಗಡೆ ಸುಳಿ ಮಾತ್ರ ಉಳಿಸಿಕೊಳ್ಳಬೇಕಾಗಿದೆ. ಒಬ್ಬರೂ ಇವರ ಸ್ಟಾಫ್ ಇಲ್ಲ. ಯಾವುದೇ ಫಾರಂನಲ್ಲಿ ಸ್ಟಾಫ್ ಇಲ್ಲ. ಇವರದ್ದು ಎರಡು ಫಾರಂ ಇದೆ. ಸ್ಟೇಟ್ ಸೆಕ್ಟಾರ್, ಜಿಲ್ಲಾ ಪರಿಷತ್ ಸೆಕ್ಟಾರ್, ಎರಡೂ ಖಾಲಿ ಇವೆ. ಮತ್ತು ಇದಕ್ಕಾಗಿ ಬಂಗಾರಪ್ಪನವರು ಕೃಷಿ ಮಂತ್ರಿಗಳಿದ್ದಾಗ ಒಂದು ಹೊಸ ಸ್ಕಾ ್ವಡನ್ನು ಮಾಡಿಬಿಟ್ಟಿದ್ದರು ಒಂದೊಂದು ಏರಿಯಾಗೆ. ಆ ಸ್ಕ್ವಾಡ್‌ಗಳನ್ನು ಏಕೆ ವಿತ್‌ಡ್ರಾ ಮಾಡಿದಿರಿ? ಏನಾದರೂ ರೈತರನ್ನು ಉಳಿಸುವುದಕ್ಕೆ ಆಗುತ್ತದೆಯೇ ಇಲ್ಲವೇ? ದಯಮಾಡಿ ಹೇಳಿ.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಸ್ಕಾ ್ವಡ್ ಜಾಸ್ತಿ ಮಾಡಿದ್ದೇವೆಯೇ ಹೊರತು ಕಡಿಮೆಯಂತೂ ಮಾಡಿಲ್ಲ. ಎಲ್ಲಿಯೂ ಕೂಡ ಹಿಂತೆಗೆದುಕೊಂಡಿಲ್ಲ. ಜೊತೆಗೆ ಶಾಸಕರು ಹೇಳಿದ ರೀತಿಯಲ್ಲಿ ಕಪ್ಪು ತಲೆ ಹುಳುವಿನ ನಿಯಂತ್ರಣವನ್ನು ಸುತ್ತಮುತ್ತಲಿನ ಎಲ್ಲಾ ರೈತರು ನಿಯಂತ್ರಣವನ್ನು ಮಾಡಬೇಕು. ಒಬ್ಬ ರೈತರು ಬಿಟ್ಟರೂ ಇದನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಸಿಬ್ಬಂದಿಗಳು ಜಾಸ್ತಿ ಇಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ. ಎಕಾನಾಮಿ ಡ್ರೈವ್‌ನಿಂದ, ಬಹುಶಃ ಮುಂದಿನ ಐದು ವರ್ಷಗಳಲ್ಲಿ ನಮ್ಮ ತೋಟಗಾರಿಕೆಯಲ್ಲಿ ಒಬ್ಬರು ಗಾರ್ಡ್‌ನರ್‌ಗಳು ಹೆಚ್.ಎ.ಆಗಿ, ಎ.ಹೆಚ್.ಓ. ಬಡ್ತಿಯನ್ನು ಪಡೆದುಕೊಂಡು ಒಬ್ಬರೂ ಆ ಪೋಸ್ಟ್‌ನಲ್ಲಿ ಉಳಿದುಕೊಳ್ಳುವುದಿಲ್ಲ. ಆದರೆ ಕೆಳ ಹಂತದಲ್ಲಿ ಕೆಲಸವನ್ನು ಮಾಡುವವರು ಒಬ್ಬರೂ ಕೂಡ ಉಳಿದುಕೊಳ್ಳುವುದಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿ 800 ಜನ ಹೊಸದಾಗಿ ಗಾರ್ಡ್‌ನರ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಬಹುಶಃ ಅವರು ಬಂದಮೇಲೆ ಸುಧಾರಣೆಯನ್ನು ಮಾಡಬಹುದು. ಇದರ ಬಗ್ಗೆ ತನಿಖೆಗಾಗಿ 4 ಹೊಸ ತಂಡಗಳನ್ನು ಮಾಡಿ, 4 ಹೊಸ ಜೀಪ್‌ಗಳನ್ನು ತರಿಸುತ್ತಿದ್ದೇವೆ. ಎಲ್ಲಿ ವಿಶೇಷವಾಗಿ ತೆಂಗಿನ ತೋಟ ಅರಸೀಕೆರೆ, ತುಮಕೂರು, ಮೈಸೂರು ಈ ಜಿಲ್ಲೆಗಳಿಗೆ ಹೆಚ್ಚಿನ ಆಧ್ಯತೆಯನ್ನು ಕೊಟ್ಟು ಈ ತಂಡಗಳನ್ನು ಕಳುಹಿಸಿ ನಿಯಂತ್ರಣವನ್ನು ಮಾಡಲು ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಂದು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಟಿ.ಹೆಚ್. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನಲ್ಲಿ ಸುಮಾರು 19,000 ಹೆಕ್ಟೇರ್ ತೆಂಗಿನ ಮರಗಳಿವೆ. 4-6 ವರ್ಷಗಳಿಂದ ಈ ತೆಂಗಿನ ಮರಗಳಿಗೆ ಅಣಬೆ ರೋಗ ತಗುಲಿ ಬಹಳಷ್ಟು ಅನಾನುಕೂಲಗಳಾಗಿನೆ. ಈಗಾಗಲೇ ಸರ್ಕಾರದವರು ಕಳೆದ ವರ್ಷ 17 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದರು. ಈಗಾಗಲೇ 21 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ಇದು ಸಾಲದು, ಅಲ್ಲಿ ಒಂದು ಲ್ಯಾಬೊರೆಟರಿಯ ಅವಶ್ಯಕತೆ ಇದೆ. ಅಲ್ಲಿ ಲ್ಯಾಬೊರೆಟರಿಯಲ್ಲಿ ಯಾರೂ ನೌಕರರು ಇಲ್ಲ. ಇದಕ್ಕೆ ಸರ್ಕಾರದವರು ಡೈರೆಕ್ಷನ್ ಕೊಡಬೇಕು, ನೌಕರರನ್ನು ಇಲ್ಲಿಗೆ ತುಂಬಬೇಕು ಮತ್ತು ಪರಿಹಾರವನ್ನು ಹೆಚ್ಚು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಇವರು ಪರೋಪಜೀವಿ ಬಿಡುತ್ತೇವೆಂದು ಹೇಳುತ್ತಾರೆ. ಆದರೆ ಇದನ್ನು ನಾನು ಎಲ್ಲಿಯೂ ನೋಡಿಲ್ಲ. ನಾನು ಸುಮಾರು ಸಾವಿರಾರು ಎಕರೆ ತೆಂಗನ್ನು ಬೆಳೆದಿರತಕ್ಕಂತಹ ಪ್ರದೇಶದಲ್ಲಿ ಎಲ್ಲಾ ಸುತ್ತಾಡಿದ್ದೇನೆ. ಎಲ್ಲಿಯೂ ಬಿಡುವುದಕ್ಕೆ ಆಗುವುದಿಲ್ಲ ಮತ್ತು ಬಿಟ್ಟು ಇಲ್ಲ. ಸಿಬ್ಬಂದಿ ಕೊರತೆ ಎಂದು ಹೇಳಿದ್ದೀರಿ ಅದನ್ನು ತುಂಬುವುದಕ್ಕೆ ಆಗುವುದಿಲ್ಲ. ಹಣದ ಕೊರತೆ ಎಂದು ಹೇಳುತ್ತೀರಿ ಅದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಮತ್ತು ಔಷಧಿ ಕೊರತೆ ಎಂದು ಹೇಳುತ್ತೀರಿ ಅದನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಅಂದ ಮೇಲೆ ಇವತ್ತು 15 ಲಕ್ಷ ತೆಂಗಿನ ಮರಗಳು ಇವತ್ತು ನಾಶವಾಗುತ್ತಿದೆ. ಇದು ಒಂದು ರೀತಿಯಲ್ಲಿ ಗಾಳಿಯನ್ನು ಬೀಸಿದರೆ ಸಾಕು ಅಂಟು ರೋಗದ ರೀತಿಯಲ್ಲಿ ಹರಡುತ್ತದೆ. ಗಾಳಿಯು ಬೀಸಿದರೆ ಒಂದು ಮರದಿಂದ ಮತ್ತೊಂದು ಮರಕ್ಕೆ ರೋಗವು ಹರಡುತ್ತದೆ. ಈ ರೋಗ ಬಂದರೆ ಸುಳಿಯು ಬಿದ್ದು ಹೋಗುತ್ತದೆ. ಗರಿಗಳೆಲ್ಲಾ ಒಣಗಿ ಹೋಗುತ್ತದೆ. 30 ವರ್ಷ 40 ವರ್ಷಗಳಿಂದ ಇದ್ದಂತಹ ತೆಂಗಿನ ಮರಗಳೆಲ್ಲಾ ನಾಶವಾಗುತ್ತಿದೆ. ಆದ್ದರಿಂದ ಸರಿಪಡಿಸುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದರ ಬಗ್ಗೆ ಸತ್ಯವನ್ನು ಏನಾಗಿದೆಂದು ಹೇಳಿ, ಸುಮ್ಮನೆ ರೈತರಿಗೆ ಮೋಸವನ್ನು ಮಾಡುವುದು ಬೇಡ. ವಸ್ತುಸ್ಥಿತಿಯನ್ನು ಸದನದಲ್ಲಿ ಹೇಳಿ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ವಸ್ತು ಸ್ಥಿತಿ ಮತ್ತು ಸತ್ಯವನ್ನೇ ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರಿಗೆ ಏಕೆ ಅರ್ಥವಾಗುತ್ತಿಲ್ಲವೋ ಗೊತ್ತಿಲ್ಲ. ಆದರೂ ಕೂಡ ನಮ್ಮ ಇಲಾಖೆಗೆ ಇದನ್ನು ಸರಿಪಡಿಸುವುದಕ್ಕೆ 2 ಕೋಟಿ 8 ಲಕ್ಷ ರೂಪಾಯಿಗಳನ್ನು ಕೊಕೊನೆಟ್ ಬೋರ್ಡ್‌ನಿಂದ ತೆಗೆದುಕೊಂಡಿದ್ದೇವೆ. ಆ ಹಣವನ್ನು ಪೂರ್ಣವಾಗಿ ವಿನಿಯೋಗ ಮಾಡಿ ಇದನ್ನು ನಿಯಂತ್ರಣ ಮಾಡುತ್ತೇವೆ. ಆದರ ಸದ್ವಿನಿಯೋಗವನ್ನು ಪಡೆದುಕೊಂಡು ನಿಯಂತ್ರಣಕ್ಕೆ ಏನೇನು ಕೊರತೆ ಇದೆ ಅಂದರೆ ಸಿಬ್ಬಂದಿ ಕೊರತೆ ಎಲ್ಲಾ ಕೊರತೆಯನ್ನು ತುಂಬಿ ಇದರ ನಿಯಂತ್ರಣಕ್ಕೆ ಪ್ರಮಾಣವಾದಂತಹ ಪ್ರಯತ್ನವನ್ನು ಮಾಡಿ ನಿಲ್ಲಿಸುತ್ತೇವೆಂದು ಎನ್ನುವಂತಹ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಈ ತೆಂಗಿನ ಮರಗಳಿಗೆ ಈ ಕಪ್ಪು ತಲೆ ಹುಳುವಿನ ರೋಗ ತಗುಲಿ ನಾಶವಾಗುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಆದುದರಿಂದ

ನಾನು ಸರ್ಕಾರದ ವಿರುದ್ಧ ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗವನ್ನು ಮಾಡಿದರು.)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸ್ಥಾಪನೆ

132 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರ ಸಾರಿಗೆಯನ್ನು ಎಂದಿನಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಎಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ವಿಭಜಿಸಲಾಯಿತು.

2) ವಿಭಜನೆಗೆ ಮುನ್ನ ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಯಿಂದ ಉಂಟಾಗುತ್ತಿದ್ದ ಸರಾಸರಿ ಮಾಸಿಕ ಲಾಭ ಅಥವಾ ನಷ್ಟ ಎಷ್ಟು?

3) ಪ್ರತ್ಯೇಕ ಸಂಸ್ಥೆಯಾದ ಮೇಲೆ ಈ ಆದಾಯದಲ್ಲಿ ಬದಲಾವಣೆ ಏನು?

4) ಎಷ್ಟು ಓಲವೋ ಬಸ್‌ಗಳನ್ನು ಬೆಂಗಳೂರು ನಗರದಲ್ಲಿ ಬಿಡಲಾಗಿದೆ. ಇವರ ಉದ್ದೇಶವೇನು?

ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

1) ಬೆಂಗಳೂರು ನಗರ ಸಾರಿಗೆಯನ್ನು ದಿನಾಂಕ 15-08-1997 ರಿಂದ "ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆ" ಯಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ವಿಭಜಿಸಲಾಯಿತು.

2) ವಿಭಜನೆಗೆ ಮುನ್ನ ಬೆಂಗಳೂರು ನಗರ ಸಾರಿಗೆ ನಷ್ಟಗಳ ವಿವರ ಈ ಕೆಳಕಂಡಂತಿವೆ.

ಮಾಹೆ		*ಲಕ್ಷ ರೂ. ಗಳಲ್ಲಿ*
ಏಪ್ರಿಲ್ 97	-	96.85
ಮೇ 97	-	20.55
ಜೂನ್ 97	+	14.59
ಜುಲೈ 97	+	5.57
ಆಗಸ್ಟ್ 97	-	20.71

1-8-97ರಿಂದ 14-8-97ರವರೆಗೆ

ಈ ಮೇಲಿನ ಅವಧಿಯಲ್ಲಿ ಮಾಸಿಕ ಸರಾಸರಿ ರೂ. 26.01 ಲಕ್ಷಗಳಷ್ಟು ನಷ್ಟವಾಗಿರುತ್ತದೆ.